# 3. ಸಾಮಾಜಿಕ ಅರಣ್ಯೀಕರಣ

## 3.1. ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮ

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಕಳೆದ 4 ದಶಕಗಳಿಂದ ಪರಿಸರ ಸಂರಕ್ಷಣೆಗೆ ಬಹಳಷ್ಟು ಕಾರ್ಯಕ್ರಮಗಳನ್ನು ಅನುಷ್ಠಾನಿಸಲಾಗಿದೆ. ಸಾಮಾಜಿಕ ಅರಣ್ಯವು ಪರಿಸರ, ಸಾಮಾಜಿಕ ಮತ್ತು ಗ್ರಾಮೀಣ ಅಭಿವೃದ್ಧಿಗೆ ಸಹಾಯ ಮಾಡುವ ಉದ್ದೇಶದಿಂದ ಅರಣ್ಯಗಳ ನಿರ್ವಹಣೆ, ಕಾಡಿನ ರಕ್ಷಣೆ ಮತ್ತು ಬಂಜರು ಭೂಮಿಯಲ್ಲಿ ಅರಣ್ಯೀಕರಣವನ್ನು ಮಾಡುವುದರಿಂದ ಸಾಧ್ಯವಾಗುತ್ತದೆ ಎಂಬುದು ಯೋಜನೆಯ ಉದ್ದೇಶವಾಗಿದೆ. ರೈತರ ಕೃಷಿಗೆ, ಮೇವಿಗೆ, ಕಟ್ಟಿಗೆ, ಸೊಪ್ಪು ಮತ್ತಿತರ ಅವಶ್ಯಕತೆಗಳನ್ನು ಪೂರೈಸಲು ಅರಣ್ಯ ಮೂಲವಾಗಿದೆ. ಮಳೆ, ಬೆಳೆಗೆ, ಗೃಹ ಬಳಕೆಗೆ, ಗ್ರಾಮೀಣ ವಸತಿಗಾಗಿ, ಸ್ಥಳೀಯ ಕೈಗಾರಿಕೆಗಳಿಗೆ, ನೈಸರ್ಗಿಕ ಸೌಂದರ್ಯಕ್ಕಾಗಿ, ವನ್ಯ ಜೀವಿಗಳ ರಕ್ಷಣೆಗಾಗಿ ಸಾಮಾಜಿಕ ಅರಣ್ಯ ಬಹಳ ಅಗತ್ಯವಾಗಿದೆ. ಸರಕಾರದ ಸಾಮಾಜಿಕ ಅರಣ್ಯವನ್ನು 'ಜನರ ಅರಣ್ಯ', 'ಜನರಿಂದಲೇ ಅರಣ್ಯ' ಮತ್ತು 'ಜನರಿಗಾಗಿ ಅರಣ್ಯ' ಎಂಬ ಧ್ಯೇಯ ವಾಕ್ಯವನ್ನು ಪರಿಪೂರ್ಣಗೊಳಿಸಿದ ಕೀರ್ತಿ ಯೋಜನೆಯದ್ದಾಗಿದೆ. ಬಹುತೇಕ ಯೋಜನೆಯ ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮವು ಅರಣ್ಯ ಇಲಾಖೆಯ ಸಹಯೋಗದಲ್ಲಿ ನಡೆಯುತ್ತದೆ. ಅರಣ್ಯ ಹಾಗೂ ಜೀವ ವೈವಿಧ್ಯತೆ ನಾಶವಾಗಲು ಕಾರಣವಾಗುವ ಬೆಂಕಿ ಅನಾಹುತ, ಸ್ವಚ್ಛತೆಯ ಕೊರತೆ, ಪ್ಲಾಸ್ಟಿಕ್ ಬಳಕೆ, ನಗರೀಕರಣ., ಮುಂತಾದ ಅಂಶಗಳ ಕುರಿತಂತೆ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸವು ಯೋಜನೆಯಿಂದ ನಡೆಯುತ್ತಿದೆ. ಜಲಾನಯನ ಕಾರ್ಯಕ್ರಮಕ್ಕೆ ಪೂರಕವಾಗಿ ಇಂಗು ಗುಂಡಿ ರಚನೆ, ನೀರಿಂಗಿಸುವುದು, ಚೆಕ್ ಡ್ಯಾಮ್, ಬದು ನಿರ್ಮಾಣ, ಹೂಳೆತ್ತುವ ಮೂಲಕ ನೀರಿನ ಸಂರಕ್ಷಣೆ., ಮುಂತಾದ ಪರಿಸರ ಸಂರಕ್ಷಣಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಫಲಾನುಭವಿಗಳಿಗೆ ಪ್ರೇರಣೆ ನೀಡಲಾಗಿದೆ.

ಇದೀಗ ಪೂಜ್ಯರ ಮಹತ್ವಾಕಾಂಕ್ಷೆಯ 'ಭೂಮಿ ತಾಯಿಯನ್ನು ರಕ್ಷಿಸಿ, ಮುಂದಿನ ಪೀಳಿಗೆಗೆ ವರ್ಗಾಯಿಸಿ' ಇದಕ್ಕಾಗಿ 'ಹಸಿರು ಬೆಳೆಸಿ, ಉಸಿರು ಉಳಿಸಿ' ಎನ್ನುವ ಧ್ಯೇಯ ವಾಕ್ಯದಲ್ಲಿ ಯೋಜನೆಯ ಜನಜಾಗೃತಿ ಪ್ರಾದೇಶಿಕ ವಿಭಾಗ ಹಾಗೂ ಕೃಷಿ ವಿಭಾಗದ ಮೂಲಕ 2022–23ನೇ ಸಾಲಿನಲ್ಲಿ ವಿಶೇಷವಾಗಿ "ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮ"ವನ್ನು ಪ್ರಾರಂಭಿಸಲಾಗಿದೆ. ಪೂಜ್ಯ ಡಾ। ಡಿ. ವೀರೇಂದ್ರ ಹೆಗ್ಗಡೆಯವರು ಈ ಕಾರ್ಯಕ್ರಮದ ಕುರಿತಂತೆ 'ಹಸಿರು ಕಡಿಮೆಯಾಗುತ್ತಿದೆ. ಕಾಡು ಪ್ರಾಣಿಗಳ ಸಂಖ್ಯೆಯೂ ಇಳಿಮುಖವಾಗಿದೆ. ಅರಣ್ಯದಲ್ಲಿರುವ ಕಾಡು ಪ್ರಾಣಿಗಳು ಆಹಾರದ ಕೊರತೆಗಾಗಿ ನಾಡಿಗೆ ಬರುತ್ತಿವೆ. ಇದರಿಂದ ಕಷ್ಟಪಟ್ಟು ರೈತ ಬೆಳೆಸಿದ ಕೃಷಿ ನಾಶವಾಗುತ್ತಿದ್ದು, ಕೃಷಿಕರಿಗೆ ಆತಂಕದಿಂದ ಬದುಕುವಂತಾಗಿದೆ. ಅರಣ್ಯ ಒತ್ತುವರಿಯೂ ಇದಕ್ಕೆ ಕಾರಣವಾಗಿರಬಹುದು. ಇಂದು ಜಗತ್ತಿಗೆ ಆಮ್ಲಜನಕದ ಕೊರತೆ ಕಾಡುತ್ತಿದ್ದು, ಕಾಡಿನ ಸಂರಕ್ಷಣೆ ಮತ್ತು ಪರಿಸರ ಸಂರಕ್ಷಣೆಯಿಂದ ಉತ್ತಮ ಆಮ್ಲಜನಕ ಸ್ವಾಭಾವಿಕವಾಗಿ ಪ್ರಕೃತಿದತ್ತವಾಗಿ ಅನುಭವಿಸಬಹುದು. ಪ್ರಸ್ತುತ ಪರಿಸ್ಥಿತಿಯಲ್ಲಿ ಮಲೆನಾಡಿನ ಪರಿಸರದಲ್ಲಿ ವನ್ಯಪ್ರಾಣಿಗಳ ಕಾಟದಿಂದಾಗಿ ರೈತರ ಕೃಷಿ ನಾಶವಾಗುತ್ತಿದ್ದು, ಈ ಎಲ್ಲಾ ಪ್ರಾಣಿಗಳು ಆಹಾರವನ್ನು ಬಯಸಿ ಬರುವುದರಿಂದ ಅವುಗಳಿಗೆ ಕಾಡಿನಲ್ಲಿ, ಕಾಡಿನಂಚಿನಲ್ಲಿ ಮತ್ತು ಅರಣ್ಯದಲ್ಲಿನ ಬಂಜರು ಭೂಮಿಯಲ್ಲಿ ಹಣ್ಣು ಹಂಪಲಿನ ಗಿಡಗಳನ್ನು ನೆಟ್ಟು ಅವುಗಳನ್ನು ಪೋಷಿಸುವ ಯೋಜನೆಯನ್ನು ಹಮ್ಮಿಕೊಳ್ಳಬೇಕೆಂದು ತಿಳಿಸಿದರು. ಈ ನಿಟ್ಟಿನಲ್ಲಿ ಕಳೆದ ವರ್ಷ ಮಾನ್ಯ ಅರಣ್ಯ ಸಚಿವರಾದ ಶ್ರೀ ಅರವಿಂದ ಲಿಂಬಾವಳಿಯವರಿಗೆ ಪತ್ರ ಬರೆದು ತಿಳಿಸಿದಾಗ ಅವರು ಕೂಡಲೇ ಪ್ರತಿಕ್ರಯಿಸಿ ಆಧುನಿಕ ರೀತಿಯ ಸುರಕ್ಷಾ ಕ್ರಮ ಅನುಸರಿಸಿಕೊಂಡು ಹಣ್ಣು ಹಂಪಲುಗಳ ಗಿಡ ನೆಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತೇವೆ ಎಂದು ತಿಳಿಸಿ ಧರ್ಮಸ್ಥಳ ಗ್ರಾಮದ ರಕ್ಷಿತಾರಣ್ಯ ಪ್ರದೇಶದಲ್ಲಿ ರಾಜ್ಯ ಮಟ್ಟದ ಪರಿಸರ ದಿನಾಚರಣೆಯನ್ನು ಆಚರಿಸಿ ಚಾಲನೆ ನೀಡಿರುತ್ತಾರೆ.

## 3.2. ಕೈಪಿಡಿ ಬಿಡುಗಡೆ

ಸಾಮಾಜಿಕ ಅರಣ್ಯ ಕಾರ್ಯಕ್ರಮದ ಸಾಧನೆಯ ಕೈಪಿಡಿಯನ್ನು ಮಾತೃಶ್ರೀ ಅಮ್ಮನವರು ಬಿಡುಗಡೆಗೊಳಿಸಿದರು. ದಶಲಕ್ಷ ಗಿಡ ನಾಟಿ ಅನುಷ್ಠಾನದ ಜವಾಬ್ದಾರಿಯನ್ನು ಜನಜಾಗೃತಿ ಪ್ರಾದೇಶಿಕ ವಿಭಾಗಕ್ಕೆ ನೀಡಲಾಗಿದ್ದು ವಿಪತ್ತು ನಿರ್ವಹಣಾ ಸ್ವಯಂಸೇವಕರ ಮೂಲಕ ಗಿಡ ನಾಟಿ ಕಾರ್ಯಕ್ರಮ ನಡೆಸಲಾಗಿತ್ತು. ಇದರ ವಾರ್ಷಿಕ ವರದಿಯನ್ನು ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಪೂಜ್ಯ ಖಾವಂದರು ಬಿಡುಗಡೆಗೊಳಿಸಿದರು.



## 3.3. "ಶೌರ್ಯ ವನ"

ಅರಣ್ಯ ಇಲಾಖೆಯ ಸಹಯೋಗದೊಂದಿಗೆ ವಿಪತ್ತು ನಿರ್ವಹಣಾ ಸ್ವಯಂಸೇವಕರು ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮದ ಮೂಲಕ "ಶೌರ್ಯ ವನ" ನಿರ್ಮಾಣ ಮಾಡಿದ್ದು ಇದರ ನಿರ್ವಹಣೆಯ ಕುರಿತಂತೆ ಶ್ರಮದಾನವನ್ನು ನಡೆಸಿರುತ್ತಾರೆ. ಪಶ್ಚಿಮಘಟ್ಟಗಳ ತಪ್ಪಲಿನಲ್ಲಿ ಅರಣ್ಯ ಇಲಾಖೆಯ ಮಾರ್ಗದರ್ಶನದಲ್ಲಿ ಸ್ವಯಂಸೇವಕರು ಶೌರ್ಯ ವನ ನಿರ್ಮಾಣ ಮಾಡಿದ್ದು ಅರಣ್ಯದಲ್ಲಿ ಹಣ್ಣು ಹಂಪಲುಗಳ ಗಿಡ ನಾಟಿ ಮಾಡಿರುತ್ತಾರೆ. ಅರಣ್ಯ ಇಲಾಖೆಯ ಅಧಿಕಾರಿಗಳು ಸ್ವಯಂಸೇವಕರ ಉತ್ಸಾಹವನ್ನು ಗಮನಿಸಿ ನಿರ್ವಹಣೆ ಮಾಡಿಕೊಂಡು ಹೋಗುವ ಬಗ್ಗೆ ಮಾರ್ಗದರ್ಶನ ನೀಡಿರುತ್ತಾರೆ. ಬೆಳ್ತಂಗಡಿ ತಾಲ್ಲೂಕಿನ ದಿಡುಪೆ ಅರಣ್ಯ ಪ್ರದೇಶದಲ್ಲಿ 8,600 ಗಿಡಗಳು, ಧರ್ಮಸ್ಥಳ ಅರಣ್ಯ ಪ್ರದೇಶದಲ್ಲಿ 16,000 ಗಿಡಗಳು, ಮೂಡಿಗೆರೆಯ ಬಣಕಲ್ ಅರಣ್ಯ ಪ್ರದೇಶದಲ್ಲಿ 13,500 ಗಿಡಗಳು, ಗುರುವಾಯನಕೆರೆಯ ಅಳದಂಗಡಿ ಪ್ರದೇಶದಲ್ಲಿ 8,000 ಗಿಡಗಳು, ವೇಣೂರು ಅರಣ್ಯ ಪ್ರದೇಶದಲ್ಲಿ 14,000 ಗಿಡಗಳನ್ನು ಸ್ವಯಂಸೇವಕರು ನಾಟಿ ಮಾಡಿದ್ದು ನಿರ್ವಹಣೆಯನ್ನು ಮಾಡಿಕೊಂಡು ಹೋಗುತ್ತಿದ್ದಾರೆ.






## 3.4. ದಶಲಕ್ಷ ಗಿಡ ನಾಟಿ

ಪೂಜ್ಯರ ಆಶಯದಂತೆ ದಶಲಕ್ಷ ಗಿಡ ನಾಟಿ ಕಾರ್ಯಕ್ರಮವನ್ನು ಬೆಳ್ತಂಗಡಿ ತಾಲ್ಲೂಕಿನ ವೇಣೂರು ಅರಣ್ಯ ಪ್ರದೇಶದಲ್ಲಿ ನಡೆಸಲಾಗಿದೆ. ಸುಮಾರು 14,000 ಹಣ್ಣು ಹಂಪಲು ಗಿಡಗಳನ್ನು ನಾಟಿ ಮಾಡಲಾಗಿದೆ. ಕಾರ್ಯಕ್ರಮದ ಉದ್ಘಾಟನೆಗೆ ಕರ್ನಾಟಕ ಸರ್ಕಾರದ ಅರಣ್ಯ ಸಚಿವರಾದ ಶ್ರೀ ಉಮೇಶ್ ಕತ್ತಿ ಇವರು ಆಗಮಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದರು. ರಾಜ್ಯದಾದ್ಯಂತ ವಿಪತ್ತು ನಿರ್ವಹಣಾ ಸ್ವಯಂಸೇವಕರ ಮೂಲಕ ಗಿಡ ನಾಟಿ ಕಾರ್ಯಕ್ರಮ ನಡೆಸಲಾಗಿದ್ದು ಸುಮಾರು 11 ಲಕ್ಷ ಗಿಡಗಳನ್ನು ನಾಟಿ ಮಾಡಲಾಗಿದೆ.



